Indian Journal of History and Archaeology

ISSN (E):2582-225X
Vol-1 Issue 4, NOV-DEC, 2019, 51-57

# ಭಾರತದಲ್ಲಿ ನೀಲಿ ಬೆಳೆಗಾರರ ಹೋರಾಟ- ಒಂದು ಅವಲೋಕನ

ಡಾ.ಜಯಮ್ಮ.ಬಿ

**ಡಾ. ಜಯಮ್ಮ ಬಿ**
ಸಹಾಯಕ ಪ್ರಾಧ್ಯಾಪಕರು
ಸ್ನಾತಕೋತ್ತರ ಇತಿಹಾಸ ವಿಭಾಗ
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ

ಬ್ರಿಟೀಷ್ ಆಳ್ವಿಕೆಯ ವಿರುದ್ಧವಾಗಿ ನೇರವಾಗಿ ಹೋರಾಟಕ್ಕೆ ಇಳಿದವರು ರೈತರು, ಕಾರಣ ಬ್ರಿಟೀಷರ ಕಾಯ್ದೆ ಕಾನೂನುಗಳು ಅವರ ಮೇಲೆ ನೇರ ಪರಿಣಾಮವನ್ನು ಬೀರಿದ್ದವು. ಅವರು ಜಾರಿಗೆ ತಂದ ಕೃಷಿ ಹಾಗೂ ಹೊಸ ಹೊಸ ಭೂ ಕಂದಾಯ ನೀತಿಗಳು ಪ್ರಮುಖ ಕಾರಣವಾದವು. ಬ್ರಿಟೀಷರು ಭಾರತಕ್ಕೆ ಬರುವ ಮುನ್ನ ಇಲ್ಲಿಯ ಕೃಷಿ ಸಾಂಪ್ರದಾಯಿಕವಾಗಿದ್ದು, ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯುತ್ತಿದ್ದರು. ಅಲ್ಲದೆ ಅವರು ಸರ್ಕಾರಕ್ಕೆ ನೀಡುವ ಕಂದಾಯವೂ ಸಾಂಪ್ರದಾಯಿಕವಾಗಿತ್ತು. ಆದರೆ ಬ್ರಿಟೀಷರು ಭಾರತದಲ್ಲಿ ತಮ್ಮ ಆಡಳಿತವನ್ನು ಶುರುಮಾಡಿದ ನಂತರ ಭಾರತೀಯ ಆರ್ಥಿಕ ನೀತಿ ಬದಲಾಯಿತು. ಇಲ್ಲಿಯವರೆಗೂ ರೈತರು ನಿರಾಳವಾಗಿ ತಮ್ಮ ಜಮೀನುಗಳಲ್ಲಿ ತಮಗೆ ಬೇಕಾದ ಬೆಳೆಗಳನ್ನು ಬೆಳೆಯುತ್ತಾ, ತಮ್ಮ ಅರಣ್ಯಗಳ ಲಭ್ಯವಿರುವ ವಸ್ತುಗಳನ್ನು ಯಾವುದೇ ನಿರ್ಬಂಧಗಳಿಲ್ಲದೆ ಬಳಸುತ್ತಾ ಇದ್ದರು. ಆದರೆ ಬ್ರಿಟೀಷರು ಲಾಭಾಂಶದ ದೃಷ್ಠಿಯಿಂದ ಇಲ್ಲಿಯ ಕೃಷಿ ನೀತಿ, ಅರಣ್ಯ ನೀತಿ, ಭೂಕಂದಾಯ ನೀತಿ ಇತ್ಯಾದಿಗಳನ್ನು ಬದಲಾಯಿಸಿದರು. ಭೂಮಿಗಳನ್ನು ವೈಜ್ಞಾನಿಕವಾಗಿ ಅಳತೆಮಾಡಿಸಿ ಪ್ರತಿ ಜಮೀನಿಗೂ ಇಂತಿಷ್ಟೆ ಕಂದಾಯ ಎಂದು ನಿಗದಿಮಾಡಿದರು. ಅಲ್ಲದೇ ಅವರುಗಳ ಜಮೀನಿನಲ್ಲಿ ತಮಗೆ ಬೇಕಾದ ಆಧುನಿಕ ವಾಣಿಜ್ಯ ಬೆಳೆಗಳನ್ನು ಬೆಳೆಸಲು ಆರಂಭಿಸಿದರು. ಈ ವೇಳೆಗಾಗಲೆ ಬ್ರಿಟನ್‌ನಲ್ಲಿ ಕೈಗಾರಿಕಾ ಕ್ರಾಂತಿ ಅಗಾದವಾಗಿ ಆಗಿತ್ತು. ಹಾಗಾಗಿ ಅಲ್ಲಿಯ ಕೈಗಾರಿಕೆಗಳು ಕಚ್ಚಾ ವಸ್ತುಗಳಿಗಾಗಿ ಅಹಾಕಾರ ಎದುರಿಸುತ್ತಿದ್ದರು. ಹಾಗಾಗಿ ಅಲ್ಲಿಯ ಕೈಗಾರಿಕೆಗಳಿಗೆ ಭಾರತದಿಂದ

ಕಚ್ಚಾವಸ್ತುಗಳನ್ನು ಪೂರೈಸುವ ವ್ಯವಸ್ಥೆಯನ್ನು ರೂಪಿಸಿದರು. ಜೊತೆಗೆ ಸಮುದ್ರದ ಮೇಲೆ ಹಿಡಿತ ಸಾಧಿಸಿದ್ದ ಬ್ರಿಟೀಷರು ವಿಶ್ವದ ಯಾವುದೇ ರಾಷ್ಟ್ರಗಳಿಂದ ಯಾವುದೇ ನಿರ್ಭಂಧಗಳಿಲ್ಲದೆ ತಮ್ಮ ತಾಯ್ನಾಡಿಗೆ ಅವರು ವಸ್ತುಗಳನ್ನು ಪೂರೈಸುತ್ತಿದ್ದರು. ಬ್ರಿಟನ್‌ಗೆ ಮಾತ್ರವಲ್ಲ, ಇತರೆ ರಾಷ್ಟ್ರಗಳಿಗೂ ವಸ್ತುಗಳನ್ನು ಪೂರೈಸುತ್ತಿದ್ದರು. ಹಾಗಾಗಿ ಇಲ್ಲಿಯ ರೈತರು ಬ್ರಿಟಿಷರಿಗೆ ಬೇಕಾದ ವಸ್ತುಗಳನ್ನು, ಬೆಳೆಗಳನ್ನು ಮಾತ್ರ ಬೆಳೆಯುವ ಪರಿಸ್ಥಿತಿ ಬಂದಿತು. ಅದರಲ್ಲಿ ಒಂದು ಪ್ರಮುಖ ಬೆಳೆ ಎಂದರೆ ನೀಲಿ.

ಭಾರತೀಯ ರೈತರು ಭೂಕಂದಾಯ ಮತ್ತು ಭೂಮಿಯ ಹಕ್ಕುಗಳಿಗೆ ಮಾತ್ರ ಹೋರಾಟ ಮಾಡಲಿಲ್ಲ, ನಾವು ನೀಲಿ ಬೆಳಯನ್ನು ಬೆಳೆಯುವುದಿಲ್ಲ ಎಂದು ಕೂಡ ಹೋರಾಟ ಮಾಡಿದರು. ರೈತ ಚಳುವಳಿಗಳಲ್ಲಿ ನೀಲಿ ಬೆಳೆಗಾರರ ಹೋರಾಟ ಒಂದು ಕರಾಳ ಅಧ್ಯಾಯವಾಗಿದೆ. ಅವರ ಸಂಕಷ್ಟ ಅವರ ಜಾನಪದ ಹಾಡುಗಳು, ಕಥೆ, ಲಾವಣಿಗಳಲ್ಲಿ ಇಂದಿಗೂ ಜೀವಂತವಾಗಿರುವುದನ್ನು ಕಾಣಬಹುದು. ಕ್ರಿ.ಶ.1857ರ ಕ್ರಾಂತಿಯ ನಂತರ ನಿಧಾನವಾಗಿ ತಲೆ ಎತ್ತಿದ್ದು ನೀಲಿ ಬೆಳೆಗಾರರ ಹೋರಾಟ, ಇದು ಬಂಗಾಳ, ಬಿಹಾರಗಳ ಒಂದು ಭಾಗದಲ್ಲಿ ಮಾತ್ರ ಇದ್ದರೂ ಅದರ ದುಷ್ಪರಿಣಾಮ ಅತ್ಯಂತ ಕಠೋರವಾಗಿತ್ತು. ಇದನ್ನು ನೆನೆದರೆ ಇಂದಿಗೂ ಪ್ರತಿ ಭಾರತೀಯನ ಮನನೋಯುತ್ತದೆ. ಹಾಗೂ ಬ್ರಿಟೀಷರ ನೀಚ ಕೃತ್ಯ ಗೋಚರಿಸುತ್ತದೆ.

ನೀಲಿ ಬಟ್ಟೆಗಳಿಗೆ ಬಣ್ಣ ಹಾಕಲು ಬಳಸುವ ಒಂದು ಸಸ್ಯ. ಇಂತಹ ನೀಲಿಗೆ ಯೂರೋಪಿನಲ್ಲಿ ಅತ್ಯಂತ ಬೇಡಿಕೆ ಇದ್ದು, ತುಂಬಾ ಉತ್ಕೃಷ್ಟವಾದ ನೀಲಿಯನ್ನು ಬಂಗಾಳದಲ್ಲಿ ಬೆಳೆಯಲಾಗುತ್ತಿತ್ತು. ಇದು ಭಾರತದಿಂದ ರಫ್ತಾಗುತ್ತಿದ್ದ ಮುಖ್ಯ ವಸ್ತುಗಳಲ್ಲಿ ಒಂದಾಗಿತ್ತು. ಬ್ರಿಟೀಷ್ ಪ್ಲಾಟರ್‌ಗಳು ಬಂಗಾಳ ಭಾಗದಲ್ಲಿ ಭೂಮಿಯನ್ನು ಗುರುತಿಸಿ ಅಲ್ಲಿ ಇದರ ಕಾರ್ಖಾನೆಗಳನ್ನು ಸ್ಥಾಪಿಸಿದರು. ಇವರು ನಿರ್ದಿಷ್ಟ ಪ್ರಮಾಣದ ನೀಲಿ ಬೆಳೆದು ಕೊಡಲು ರೈತರೊಂದಿಗೆ ಕರಾರು ಮಾಡಿಕೊಳ್ಳುತ್ತಿದ್ದರು. ಇಲ್ಲಿಯ ರೈತರು ಎರಡು ಬಗೆಯಲ್ಲಿ ನೀಲಿ ಬೇಸಾಯ ಮಾಡುತ್ತಿದ್ದರು. ಒಂದು ನೀಲಿ ಬೆಳೆಗಾರ ತನ್ನ ಜಮೀನಿನಲ್ಲಿ ತನ್ನದೆ ಖರ್ಚುವೆಚ್ಚದಲ್ಲಿ ನೀಲಿ ಬೆಳೆಯುವುದು, ಮತ್ತೊಂದು ರೈತನೊಂದಿಗೆ ಪ್ಲಾಂಟರನ್ನು ಒಪ್ಪಂದಮಾಡಿಕೊಂಡು ನೀಲಿ ಬೆಳೆಯುವ ಬೇಸಾಯ, ಮೊದಲನೇ ಬೇಸಾಯ ಪದ್ಧತಿ ಅಷ್ಟೇನೂ ತೊಂದರೆದಾಯಕವಾಗಿರಲಿಲ್ಲ ಆದರೆ ಎರಡನೇ ಮಾದರಿ ಬೇಸಾಯ ಅತ್ಯಂತ ಕ್ರೂರ ಪದ್ಧತಿಯಾಗಿತ್ತು. ಇವರ ಒಪ್ಪಂದದ ಕರಾರಿನಲ್ಲಿ ಮುಂಗಡ ಹಣ ಫಸಲಿನ ಬೆಲೆಗಳ ಉಲ್ಲೇಖವೂ ಇರುತ್ತಿತ್ತು. ಇದನ್ನು ವರ್ಷದ ಕೊನೆಯಲ್ಲಿ ಚುಕ್ತಮಾಡಬೇಕಾಗಿತ್ತು. ಈ ವ್ಯವಸ್ಥೆ ರೈತರನ್ನು ದುರುಪಯೋಗ ಮಾಡಿಕೊಂಡಿತ್ತು.

ಎರಡನೇ ಪದ್ಧತಿಯಲ್ಲಿ ರೈತನಿಂದ ನಾನಾ ಬಗೆಯ ಶುಲ್ಕಗಳನ್ನು ವಸೂಲಿ ಮಾಡಲಾಗುತ್ತಿತ್ತು. ಬೀಜಗಳಿಗೆ, ಗಾಡಿ, ಕರಾರಿನ ಸ್ಟಾಂಪ್ ಶುಲ್ಕ ಇತ್ಯಾದಿ, ಫಸಲಿಗೆ ಇಲ್ಲಿ ಕೊಡುತ್ತಿದ್ದ ಬೆಲೆ ಮಾರುಕಟ್ಟೆ

ಬೆಲೆಗಿಂತ ಅರ್ಧದಷ್ಟು ಅಥವಾ ಮೂರನೇ ಒಂದು ಭಾಗದಷ್ಟು ಕಡಿಮೆ. ಮಾರುಕಟ್ಟೆ ಬೆಲೆ ಹತ್ತರಿಂದ ಮೂವತ್ತು ರೂ.ಗಳಷ್ಟಿದ್ದರೆ ಇವರು ಮಣಕ್ಕೆ ನಾಲ್ಕು ರೂನಂತೆ ಪಡೆಯುತ್ತಿದ್ದರು. ಬ್ರಿಟೀಷ್ ಪ್ಲಾಂಟರನು ರೈತರ ಜಮೀನನ್ನು ನೀಲಿ ಬೆಳೆಗೆ ಆಯ್ಕೆಮಾಡುತ್ತಿದ್ದ ಆಯ್ಕೆಯಾದ ಭೂಮಿಯಲ್ಲಿ ಕಡ್ಡಾಯವಾಗಿ ನೀಲಿಯನ್ನು ಬೆಳೆಯ ಬೇಕಾಗಿತ್ತು. ಆ ಭೂಮಿ ಉತ್ಕೃಷ್ಟ ಭೂಮಿ ಆಗಿದ್ದು, ಅಲ್ಲಲ್ಲಿ ನೀಲಿಗಿಂತ ಹೆಚ್ಚಿನ ಬೆಲೆಯ ಬೆಳೆಯನ್ನು ಬೆಳೆಯಬಹುದಾಗಿತ್ತು. ಆದರೆ ಪ್ಲಾಂಟರ ಹೇಳಿದಂತೆಯೇ ಅಲಲಿ ನೀಲಿಯನ್ನು ಮಾತ್ರ ಬೆಳೆಯಬೇಕಾಗಿತ್ತು. ಅಲ್ಲದೆ ಇಂತಿಷ್ಟು ಭೂಮಿಯಲ್ಲಿ ಇಂತಿಷ್ಟು ನೀಲಿಯನ್ನು ಬೆಳೆಯಬೇಕು ಎಂಬ ನಿಯಮವಿತ್ತು. ಹಾಗಾಗಿ ಪ್ಲಾಟರ ನೀಲಿ ಬೆಳೆಯ ಭೂಮಿಯನ್ನು ಅಳೆಯುವಾಗ ಹೆಚ್ಚಾಗಿ ಅಳೆಯುತ್ತಿದ್ದನು. ಆಗ ರೈತ ನಿಗದಿಯಾಗಿದ್ದಕ್ಕಿಂತ ಹೆಚ್ಚಿನ ನೀಲಿ ಬೆಳೆಯಬೇಕಾಗಿತ್ತು. ನೀಲಿಯನ್ನು ಅಳತೆಮಾಡುವಾಗ ಕಂತೆ ಕಟ್ಟುವಾಗಲೂ ಸಹ ಮೋಸಮಾಡುತ್ತಿದ್ದರು, ಹಾಗಾಗಿ ರೈತರಿಗೆ ಬೆಲೆಯಲ್ಲಿ, ಅಳತೆಯಲ್ಲಿ, ತೂಕದಲ್ಲಿ ಮೋಸ ಆಗುತ್ತಿತ್ತು. ರೈತ ಪಡೆದ ಅತ್ಯಲ್ಪ ಹಣದಲ್ಲಿ ಪ್ಲಾಂಟರ್‌ಗಳು , ಗುಮಾಸ್ತರು, ಕೆಲಸಗಾರರಿಗೆ ಕಾಣಿಕೆಗಳನ್ನು ನೀಡಬೇಕಾಗಿತ್ತು. ರೈತನು ಪ್ಲಾಂಟರನ ನೌಕರನಿಗೆ ಇನಾಮು ನೀಡಬೇಕಾಗಿತ್ತು.

ನೀಲಿ ಬೆಳೆಯಲ್ಲಿ ರೈತನಿಗೆ ಎಲ್ಲಾ ಕಡೆಯಿಂದ ಮೋಸವೇ ಆಗುತ್ತಿದ್ದುದರಿಂದ ಅವನು ಪ್ಲಾಂಟರನಿಂದ ಪಡೆದ ಮುಂಗಡ ಹಣವನ್ನು ಹಿಂದಿರುಗಿಸಲು ಸಾಧ್ಯವಾಗುತ್ತಿರಲಿಲ್ಲ. ಮುಂಗಡ ಪಡೆದ ಹಣ ವರ್ಷದ ಕೊನೆಯಲ್ಲಿ ಚುಕ್ತಮಾಡಲಿಲ್ಲವೆಂದರೆ ಉಳಿದ ಸಾಲವನ್ನು ನೀಲಿ ಬೆಳೆಯಲ್ಲಿಯೇ ತೀರಿಸಬೇಕಿತ್ತು. ಈ ವ್ಯವಸ್ಥೆಯಲ್ಲಿ ಇಂತಿಷ್ಟು ಭೂಮಿಯಲ್ಲಿ ಇಂತಿಷ್ಟು ನೀಲಿ ಬೆಳಯಲೇ ಬೇಕಿತ್ತು, ಅಲ್ಲದೆ ತೂಕ ಅಳತೆಯಲ್ಲಿ ಮೊಸ ಇದ್ದುದ್ದರಿಂದ ಸಾಲ ತೀರಸಲಾಗದೆ ಮುಂದಿನ ವರ್ಷದ ನೀಲಿ ಬೆಳೆಗೆ ಅದು ಸೇರುತ್ತಿತ್ತು. ಆಯಾ ವರ್ಷದ ಸಾಲ ಆಯಾ ವರ್ಷ ತೀರಿಸಲಾಗದೆ ಪ್ರತಿ ವರ್ಷವೂ ನೀಲಿ ಬೆಳೆಯ ಸಾಲದಲ್ಲಿಯೇ ರೈತ ಇರಬೇಕಿತ್ತು, ಒಮ್ಮೆ ಪ್ಲಾಂಟರ್‌ಗಳಿಂದ ನೀಲಿ ಬೆಳೆಯ ಒಪ್ಪಂದ ಮಾಡಿಕೊಂಡರೆ ಮುಗಿಯಿತು, ಅವನ ಜೀವನ ಪೂರ್ತಿ ನೀಲಿ ಬೆಳೆಯ ಸಾಲದಲ್ಲಿಯೇ ಸಾಯಬೇಕಿತ್ತು, ನೀಲಿ ಬೇಸಾಯ ಮುಂದುವರೆಸಿಕೊಂಡು ಹೋಗುವಂತೆ ಮಾಡುವ ಕಾನೂನು ಬದ್ಧ ಅಥವಾ ಅರೆ ಕಾನೂನು ಬದ್ಧ ವಿಧಾನ ಇದಾಗಿತ್ತು. ಒಮ್ಮೆ ಮುಂಗಡ ಹಣ ತೆಗೆದುಕೊಂಡನೆಂದರೆ ಅವನಿಗೆ ಎಂದೂ ಋಣಮುಕ್ತಿ ಇಲ್ಲ. ಅವನಿಗಷ್ಟೆ ಅಲ್ಲ ಅವನ ಮಕ್ಕಳಿಗೂ, ಮೊಮ್ಮಕ್ಕಳಿಗೂ ಬಿಡುಗಡೆ ಇಲ್ಲ, ಸಾಲ ತೀರಿಸಲು ಬೇರೆ ಉಪಾಯ ಮಾಡಿಕೊಂಡರೂ ನೀಲಿ ಬೆಳೆಯಿಂದ ಮುಕ್ತನಾಗುತ್ತಿರಲಿಲ್ಲ. ಯಾವುದೇ ಕಾರಣಕ್ಕೂ ರೈತನಿಗೆ ಬೆಂಬಲ ಅಥವಾ ಪ್ರೋತ್ಸಾಹ ಇರಲಿಲ್ಲ, ಹೆಚ್ಚು ಕಡಿಮೆ ಯೂರೋಪಿನ ಜೀತ ವ್ಯವಸ್ಥೆ ಇದ್ದಂತೆ ಈ ನೀಲಿ ಬೆಳೆಯ ಬೇಸಾಯ ಒಮ್ಮೆ ಜೀತಗಾರನಾದರೆ ಎಂದೆಂದಿಗೂ ಜೀತಗಾರನೇ.

ISSN (E):2582-225X, Vol-1 Issue 4, NOV-DEC, 2019, 51-57

ಈ ರೀತಿಯ ಕಷ್ಟ ಇದ್ದರೂ ನೀಲಿ ಬೆಳೆಯನ್ನು ಸುಮಾರು  ವರ್ಷಗಳಿಂದ ರೈತರು ಬೆಳೆಯಲು ಕಾರಣ ಪ್ಲಾಂಟರ್‌ಗಳು ಬ್ರಿಟೀಷ್ ಕಾಯ್ದೆಗಳನ್ನು ತಮ್ಮ ಕೈಗೆ ತೆಗೆದುಕೊಂಡು ನಾನಾ ರೀತಿಯ ದಮನಕಾರಿ ಕ್ರಮಗಳನ್ನು ಅವರು ತೆಗೆದುಕೊಳ್ಳುತ್ತಿದ್ದರು. ಪ್ರತಿ ಕಾರ್ಖಾನೆಗಳಲ್ಲಿ ಪುಂಡರನ್ನು ಸಾಕಿಕೊಳ್ಳುತ್ತಿದ್ದರು, ಇವರುಗಳು ರೈತರನ್ನು ಹೊಡೆಯುವುದು ಬಡೆಯುವುದು, ಬಲವಂತವಾಗಿ ಎತ್ತಿಕೊಂಡು ಹೋಗಿ ಗೋದಾಮುಗಳಲ್ಲಿ ಕೂಡಿ ಹಾಕುವುದು, ಚುಚ್ಚುವುದು, ಚರ್ಮದ ಚಾಟಿಯಿಂದ ಥಳಿಸುವುದು, ಇವೆಲ್ಲವುಗಳು ಪ್ಲಾಂಟರುಗಳ ಅಸ್ತ್ರಗಳಾಗಿದ್ದವು, ಕೆಲವರು ಇಂತಹ ದೌರ್ಜನ್ಯಗಳ ವಿರುದ್ಧ ಕೋರ್ಟ್ ಮೆಟ್ಟಿಲುಗಳನ್ನೇರಿದರೂ ಯಾವುದೇ ಪ್ರಯೋಜನವಾಗುತ್ತಿರಲಿಲ್ಲ.

ಭಾರತಕ್ಕೆ ಬ್ರಿಟೀಷರು ಮುಕ್ತವಾಗಿ ಬರುವ ಅವಕಾಶ ದೊರೆತ ನಂತರ ಇಲ್ಲಿ ನೀಲಿ ಪ್ಲಾಂಟರ್‌ಗಳ ಸಂಖ್ಯೆಯೂ ಅತ್ಯಧಿಕವಾಗಿತು, ಪ್ಲಾಂಟರ್‌ಗಳ ಮಧ್ಯೆ ಪೈಪೋಟಿ ಉಂಟಾಗಿ ಹೊಸ ರೀತಿಯ ವ್ಯವಸ್ಥೆ ಕಾಣಿಸಿತು. ಇವರುಗಳು ರೈತರನ್ನು ಆಕರ್ಷಿಸಲು ಶುರುಮಾಡಿದರು, ಅಲ್ಲದೆ ಇವರು ಒಂದು ಸಂಘಟನೆಯನ್ನು ಮಾಡಿಕೊಂಡರು. ಈ ಸಂಘಟನೆ ಬಂಗಾಳದ ನೀಲಿ ಬೆಳೆಯುವ ಪ್ರದೇಶದಲ್ಲಿ ಭಯಬೀತಿ ಹಿಡಿಸಿತು. ಈ ನಿಟ್ಟಿನಲ್ಲಿ ನೀಲಿ ಬೇಸಾಯಗಾರರೆಲ್ಲ ಹೊಂದುಗೂಡಿ ಬೇಸಾಯ ಮುಂದುವರೆಸಲು ಬಯಸಲಿಲ್ಲ, ಈ ಕಾರಣದಿಂದ ಲಕ್ಷಾಂತರ ಜನರನ್ನು ವರ್ಣಬೇದ ನೀತಿಯಿಂದ ಗರ್ವಭಂಗದಿಂದ ಹೇಗಾದರೂ ಮಾಡಿ ಬೇಸಾಯ ಮಾಡಿಸಬೇಕೆಂದು ನೂರಾರು ಜನ ಬಾಡಿಗೆ ಕೊಲೆಗಾರರು ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದು , ನೀಲಿ ಕಾರ್ಖಾನೆಗಳಿಂದ ಹೊರಬಂದು ವಿಶಾಲವಾದ ಜಮೀನಿನಲ್ಲಿದ್ದ ಸಾವಿರಾರು ಕುಟುಂಬಗಳನ್ನು ಹಾಳುಗೆಡವಿ ಸಂಕಷ್ಟದಲ್ಲಿ ಸಿಲುಕಿಸಿದರು, ಬೆಳೆದು ನಿಂತ ಬೆಳೆಯನ್ನು ನಾಶ ಮಾಡಿದರು, ಮನೆಗಳನ್ನು ಕೆಡವಿದರು, ಫಸಲು ನೀಡುವ ಹಣ್ಣಿನ ಮರಗಳನ್ನು ಕಿತ್ತು ಹಾಕಿದರು, ರೈತರ ಚರ ಆಸ್ತಿಗಳಾದ ಎತ್ತು, ಗಾಡಿ, ನೆಗಿಲುಗಳನ್ನು ಒತ್ತೋಯ್ದರು, ಮನೆಯ ಯನಮಾನನ್ನು ಥಳಿಸಿದರು, ಕೆಲವೊಮ್ಮೆ ಸಾಯುವವರೆಗೂ ಥಳಿಸಲಾಯಿತು. ಮನೆಯಲ್ಲಿದ್ದವರನ್ನು ಕಾರ್ಖಾನೆಗಳಿಗೆ ಎಳೆದುಕೊಂಡು ಹೋಗಿ ಗೋಧಾಮುಗಳಲ್ಲಿ ಬಂದಿಸಲಾಯಿತು. ದಿನಗಟ್ಟಲೆ ಅನ್ನ, ಆಹಾರಗಳಿಲ್ಲದೆ ತಿಂಗಳುಗಟ್ಟಲೇ ಬಂಧನದಲ್ಲಿಟ್ಟರು, ಮನೆಯವರಿಗೆ ತಿಳಿಯದಂತೆ ಸ್ಥಳಗಳನ್ನು ಬದಲಾಯಿಸಿದರು, ಕೊನೆಗೆ ರೈತರು ಯಾವುದೇ ಪ್ರತಿಫಲಗಳಿಲ್ಲದೆ ಒಲ್ಲದ ಮನಸ್ಸುಗಳಿಂದಲೇ ನೀಲಿ ಬೆಳೆಯಲು ಒಪ್ಪಿಕೊಳ್ಳುತ್ತಿದ್ದರು. ಜಗ್ಗದ ಕೆಲವರು ಶಾಶ್ವತವಾಗಿಯೇ ಕಣ್ಮರೆಯಾದರು, ಶಾಶ್ವತವಾಗಿ ಕಣ್ಮರೆಯಾದವರ ಸಂಖ್ಯೆ ಅದೆಷ್ಟೋ.

ಇಂತಹ ದೌರ್ಜನ್ಯವನ್ನು ಖಂಡಿಸಿ ರೈತರೊಂದಿಗೆ ಸೇರಿ ಬೆಂಬಲ ನೀಡಿದವರೆಂದರೆ ಹರಿಶ್ಚಂದ್ರ ಚಟರ್ಜಿ, ಇವರು ತಮ್ಮ 'ಹಿಂದೂ ಪೇಟ್ರಿಯಾಟ್ ಪತ್ರಿಕೆಯಲ್ಲಿ ಈ ಬಗ್ಗೆ ಪ್ರಕಟಿಸಿದರು. ಜೊತೆಗೆ

ರಾಮ್‌ಗೋಪಾಲ್ ಘೋಷ್‌ರವರು ನೀಲಿ ಬೆಳೆ ಬೆಳೆಯುವ ಎಲ್ಲಾ ಪ್ರದೇಶಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಕೃತಿಯೊಂದನ್ನು ರಚಿಸಿದರು. ಶಿಶಿರ್‌ಕುಮಾರ್ ಘೋಷ್‌ರವರು ತಮ್ಮ 'ಅಮೃತ ಬಜಾರ್' ಪತ್ರಿಕೆಯಲ್ಲಿ ಈ ವ್ಯವಸ್ಥೆ, ಸ್ಥಿತಿಗತಿಗಳ ಬಗ್ಗೆ ಸವಿವರ ಮಾಹಿತಿ ನೀಡಿದರು. ಈ ವ್ಯಕ್ತಿಗಳು ಅಲ್ಲದೆ ನೇರವಾಗಿ ಈ ಚಳುವಳಿಯ ನಾಯಕತ್ವ ವಹಿಸಿದವರು ನಾದಿಯ ಜಿಲ್ಲೆಯ ಚೌಗಚ ಗ್ರಾಮದ ಬಿಷ್ಣು ಚರಣ್ ಬಿಸ್ವಾಸ್ ಮತ್ತು ದಿಗಂಬರ ಬಿಸ್ವಾಸ್ ಅವರುಗಳು ಮೂಲತಃ ನೀಲಿ ಕಾರ್ಖಾನೆಗಳ ಅಧಿಕಾರಿಗಳಾಗಿದ್ದರು. ಇವರುಗಳು ಅಲ್ಲಿದ್ದ ಅನೀತಿ, ರೈತರ ಮೇಲಿನ ದೌರ್ಜನ್ಯಗಳನ್ನು ಕಣ್ಣಾರೆ ಕಂಡು ಮನನೊಂದು ರಾಜೀನಾಮೆ ನೀಡಿ ರೈತರ ನೆರವಿಗೆ ಬಂದರು. ಇವರು ತಮ್ಮ ಚೌಗಚ ಗ್ರಾಮದಲ್ಲಿ ರೈತರನ್ನೆಲ್ಲ ಒಟ್ಟಿಗೆ ಸೇರಿಸಿ ನೀಲಿ ಬೆಳೆ ಬೆಳೆಯುವುದಿಲ್ಲ ಎಂಬ ಪಣ ತೊಡುವಂತೆ ಮಾಡಿದರು. ಅದೇ ರೀತಿ ಸುತ್ತಮುತ್ತಲಿನ ಜನರೆಲ್ಲ ಶಪಥ ಮಾಡಿದರು. ಪ್ಲಾಂಟರುಗಳು ಲಾಟಿ ಹಾಳುಗಳನ್ನು ಬಿಟ್ಟರು, ಒಬ್ಬ ರೈತರ ಮಡಿದನು ಅಲ್ಲದೆ ಹಳ್ಳಿಗಳನ್ನು ಲೂಟಿ ಮಾಡಿ ಸುಟ್ಟು ಹಾಕಿದರು. ರೈತರ ಮೇಲೆ ಕರಾರು ಬದ್ಧ ಮೊಕದ್ದಮ್ಮೆ ಹಾಕಿ ತೀರ್ಪು ತಂದರು. ಪರಿಣಾಮ ಡಿಕ್ರಿ ಹಣ ಪಾವತಿಸಬೇಕಾಯಿತು. ನಂತರ ಒಂದಾದ ಮೇಲೆ ಒಂದಾದಂತೆ ಹೆಚ್ಚು ಹಳ್ಳಿಗಳು ಅವರ ಜೊತೆ ಸೇರಿಕೊಂಡು ನೀಲಿ ಬೇಸಾಯ ಮಾಡದೆ ಇರುವ ಶಪಥ ಕೈಗೊಂಡರು. ಶಿಶಿರ್‌ಕುಮಾರ್ ಘೋಷ್ ಸೂಚನೆ ಮೇರೆಗೆ ನಾದಿಯ ಜಿಲ್ಲೆಯ 92 ಗ್ರಾಮಗಳ ರೈತರು ಜಯರಾಮಪುರದಲ್ಲಿ ಸಭೆ ಸೇರಿ ತಮ್ಮ ಜೀವಕ್ಕೆ ಅಪಾಯ ಒದಗಿದರೂ ನೀಲಿ ಬೆಳೆ ಬೆಳೆಯುವುದಿಲ್ಲ ಎಂದರು. ಅವರು ಬೇಡಿಕೆಗೆ ಲೆಫ್ಟಿನೆಂಟ್ ಗೌರ್ನರ್ ಜೆ.ಪಿ.ಗ್ರಾಂಟ್‌ನ ಪ್ರತಿಕ್ರಿಯೆಯು ಇಷ್ಟ ಇಲ್ಲದವರಿಗೆ ಬಲವಂತ ಮಾಡುವಂತಿಲ್ಲ ಎಂಬಂತ್ತಿತ್ತು. ಹಾಗಾಗಿ ನೀಲಿ ಬೇಸಾಯಗಾರರ ಸಂಘಟನೆ ವೇಗವಾಗಿ ಮುಂದುವರೆಯುತು.

ಕ್ರಿ.ಶ.1858–60ರ ಸಮಯದಲ್ಲಿ ಚಳವಳಿ ನಾದಿಯ, ಜೆಸ್ಸೂರ್, ಪಾಬ್ನ, ಮಾಲ್ಡ ಮತ್ತು ರಾಜ್ ಶಾಹಿ ಜಿಲ್ಲೆಗಳಲ್ಲಿ ಹರಡಿತು. ಈ ಸಮಯದಲ್ಲಿ ಜೆಸ್ಸೂರಿನ ಮಾಜಿಸ್ಟ್ರೇಟ್ ರೈತ ಸಭೆ ಕರೆದರು. ಸಭೆಯಲ್ಲಿ ರೈತರು ದೃಢಮನಸ್ಸಿನಲ್ಲಿದ್ದರು, ಇವರ ಒಗ್ಗಟ್ಟಿನ ಪರಿಣಾಮ 1860 ಮಾರ್ಚ್ 3 ರಂದು ಕಾಯ್ದೆ ಜಾರಿಯಾಯಿತು. ಅದರ ಪ್ರಕಾರ ಬೆದರಿಕೆ ಹಾಕುವುದು, ನೀಲಿ ಬೆಳೆಯನ್ನು ನಾಶಮಾಡುವುದು, ಹಾಳುವುದು ಮಾಡುವುದು ಇತರರಿಗೆ ಒತ್ತಾಯಿಸುವುದು ಬಲತ್ಕಾರಿಸುವುದು ಮುಂತಾದ ಕಾನೂನು ಬಾಹಿರ ಕೃತ್ಯಗಳಿಗೆ ಅವಕಾಶ ಇಲ್ಲದಂತಾಯಿತು. ಇದಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸಲು ಆಯೋಗ ರಚಿಸಲು ಕಾಯ್ದೆ ಅವಕಾಶ ನೀಡಿತು. ಈ ಅವಧಿಯಲ್ಲಿ ನೀಲಿ ಬೆಳೆಯಬಾರದೆಂಬ ಆಕ್ರೋಶ ಹೆಚ್ಚಾಗಿತ್ತು. ನೀಲಿ ಬೆಳೆಯ ವಿರುದ್ಧ ಹಿಂಸಾಚಾರ, ಗಲಬೆ, ಚಳುವಳಿಗಳೆಲ್ಲಾ ನಡೆದವು. ಸರ್ಕಾರ ಈ ಅವಧಿಯಲ್ಲಿ ಅತ್ಯುತ್ತಮ ಮ್ಯಾಜಿಸ್ಟ್ರೇಟ್‌ರುಗಳನ್ನು ನೀಲಿ ಬೆಳೆಯುವ ಜಿಲ್ಲೆಗಳಿಗೆ ವರ್ಗಾಯಿಸಿ ಸಿಬ್ಬಂದಿ ಹೆಚ್ಚಿಸಲಾಯಿತು. ಅಲ್ಲದೆ ಈ

ವಿಚಾರವಾಗಿ ಬರುವ ಕೇಸ್‌ಗಳನ್ನು ಅತ್ಯಂತ ನ್ಯಾಯಯುತವಾಗಿ ತೀರ್ಪು ನೀಡುವಂತೆ ಅವಕಾಶ ನೀಡಲಾಯಿತು.

ನೀಲಿ ವಿಷಯಕ್ಕೆ ಸಂಬಂಧಿಸಿದಂತೆ ಲೆಫ್ಟಿನೆಂಟ್ ಗೌವರ್ನರ್ ವರದಿ ಹೇಗಿತ್ತೆಂದರೆ ಕುಮರ್ ಮತ್ತು ಕಾಳಿಗಂಗಾ ನದಿಗಳ ಮೂಲಕ ಜೆಸ್ಸೂರ ಮತ್ತು ನಾದಿಯಾಗಳಲ್ಲಿ ಪ್ರಯಾಣ ಮಾಡುವಾಗ ನದಿಗಳ ಎರಡು ಬದಿಯಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೆ ಹೆಂಗಸರು, ಗಂಡಸರು, ವಯಸ್ಸಾದವರು, ಮಕ್ಕಳು ಸ್ವ-ಇಚ್ಚೆಯಿಂದ ಜಮಾಯಿಸಿ ಅವರೆಲ್ಲಾ ಒಂದೇ ಬೇಡಿಕೆ ಇಟ್ಟಿದ್ದರು. ಏನೇ ಆದರೂ ನೀಲಿ ಬೆಳೆ ಬೆಳೆಯಲು ಅವಕಾಶ ಕೊಡಬೇಡಿ ಎಂದು ನ್ಯಾಯಕ್ಕಾಗಿ ಬೇಡುತ್ತಿದ್ದರು. 1860 ಆಗಸ್ಟ್ 27 ರಂದು ಆಯೋಗ ವರದಿ ನೀಡಿತು.  ವರದಿಯಲ್ಲಿ ನೀಲಿ ಬೇಸಾಯ ಬಲತ್ಕಾರವಾಗಬಾರದು, ಆಪೇಕ್ಷೆ ಇದ್ದವರು ಮಾತ್ರ ನೀಲಿ ಬೆಳೆಯಲಿ, ಒತ್ತಾಯ ಮಾಡಬಾರದು, ಈಗಾಗಲೇ ಪ್ಲಾಂಟರ್‌ಗಳಿಂದ ಸಾಲ ಪಡೆದಿದ್ದ ರೈತರು ಹಂತ ಹಂತವಾಗಿ ಸಾಲ ತೀರಿಸುವುದು ಎಂದು ತಿಳಿಸಿತ್ತು. ಸುಮಾರು ವರ್ಷಗಳ ನೀಲಿ ಬೆಳೆಗಾರರ ಶೋಷಣೆಗೆ ಆಯೋಗ ತಡೆಯೊಡ್ಡಿತು. ಸುಮಾರು ಎರಡು ವರ್ಷಗಳ ಹೋರಾಟದ ಪರಿಣಾಮ ಈ ವರದಿಮಾಡಿದ್ದು, ಕೊನೆಗೂ ಜಯ ನೀಲಿ ಬೆಳೆಯುವ ರೈತರ ಪರವಾಗಿತ್ತು. ಈ ಆಯೋಗದಿಂದ ರೈತರನ್ನು ಬೇಸಾಯ ಮಾಡುವಂತೆ ಒತ್ತಾಯಿಸುವ ದೌರ್ಜನ್ಯಗಳು ಕಾಲಕ್ರಮೇಣ ಕಡಿಮೆಯಾಗುತ್ತಾ ಹೋದವು.

ನೀಲಿ ಬೇಸಾಯದ ಕರಾಳ ಮುಖವನ್ನು ನೋಡುವುದಾದರೆ ಸುಮಾರು ಐವತ್ತು ವರ್ಷಗಳ ಕಾಲ ಬಂಗಾಳದ ರೈತರು ನೀಲಿ ಬೇಸಾಯ ವಿರೋಧಿಸದೆ ಇದ್ದುದು, ಬ್ರಿಟೀಷರಿಗೆ ಇವರು ಹೇಡಿಗಳೆನಿಸಿದರು. ಆದರೆ ಆರಂಭದಿಂದಲೇ ಇದನ್ನು ವಿರೋಧಿಸುತ್ತಾ ಬಂದಿದ್ದರೆ ಬ್ರಿಟೀಷ್ ಪ್ಲಾಂಟರ್‌ಗಳು ಜೀವಂತವಾಗಿ ಇರುತ್ತಿರಲಿಲ್ಲ. ಏನೇ ಆದರು ಈ ಬಂಗಾಳದ ನೀಲಿ ರೈತರು ಕ್ರಿ.ಶ.1858 ರ ನಂತರ ಬ್ರಿಟೀಷ್ ಸರ್ಕಾರದ ವಿರುದ್ಧ ಶೌರ್ಯ ಪ್ರದರ್ಶಿಸಿದ್ದಂತೂ ಸತ್ಯ ಹಿಂದೂ ಪೇಟ್ರಿಯಾಟ್ ಪತ್ರಿಕೆಯಲ್ಲಿ ಹರೀಶ್‌ಚಂದ್ರ ಚಟರ್ಜಿ ಹೇಳುವಂತೆ ತಮ್ಮ ಮನೆ, ಮಠ, ಪ್ರಾಣ ಕಳೆದುಕೊಂಡರೂ ಪರವಾಗಿಲ್ಲ, ನಾವು ಮಾತ್ರ ನೀಲಿ ಬೇಸಾಯ ಮಾಡುವುದಿಲ್ಲ ಎಂದು ಬಡ ರೈತರು ತೀರ್ಮಾನಿಸಿದರು ಎಂದಿದೆ. ಬಂಗಾಳದ ಜಿಲ್ಲಾ ಮ್ಯಾಜಿಸ್ಟ್ರೇಟ್ ತಿಳಿಸುವಂತೆ ಬಂಗಾಳದ ರೈತರ ರಕ್ತದ ಕಲೆ ಇಲ್ಲದೆ ಒಂದೇ ಒಂದು ನೀಲಿ ಡಬ್ಬವೂ ಕೂಡ ಇಂಗ್ಲೆಂಡ್‌ಗೆ ರಫ್ತಾಗುತ್ತಿರಲಿಲ್ಲ. ಇದು ಇಲ್ಲಿಯ ರೈತರ ಮೇಲಾದ ದೌರ್ಜನ್ಯದ ಬಗ್ಗೆ ತಿಳಿಸಿದೆ. ಇನ್ನು ದುಃಖದ ವಿಚಾರವನ್ನು ಹೇಳಬೇಕೆಂದರೆ ಸರ್ಕಾರ ಉನ್ನತ ಅಧಿಕಾರಿಯಾದ ದೀನಬಂಧುಮಿತ್ರ, ಬಂಗಾಳಿಯಲ್ಲಿ "ನೀಲ್‌ದರ್ಪಣ್" ಎಂಬ ನಾಟಕ ರಚಿಸಿದನು. ಇದರಲ್ಲಿ ಬಂಗಾಳದಲ್ಲಿ ನೀಲಿ ಬೆಳೆಗಾರ ಬ್ರಿಟೀಷ್ ಪ್ಲಾಂಟರಗಳಿಂದ ಮುಂಗಡ ಪಡೆದು ಹೇಗೆ ಸಾಲದ ಸುಳಿಯಲ್ಲಿ ಬಿದ್ದು ಮೇಲೇಳದೆ ಮನೆ, ಮಠ, ಮಕ್ಕಳು,

ಸಂಸಾರ ತನ್ನ ಬಂಧು ಬಳಗದವರೆಲ್ಲಾ ಅದು ಹೇಗೆ ಹರಡಿ ಅವರೆಲ್ಲಾ ಸಿಲುಕಿದರು ಜೊತೆಗೆ ಜಿಲ್ಲಾ ಮ್ಯಾಜಿಸ್ಟ್ರೇಟರ್‌ಗಳು ಪ್ಲಾಂಟರ್‌ಗಳಿಗೆ ಸಹಾಯಕವಾಗಿ ಹೇಗೆ ಪಕ್ಷಪಾತ ಮಾಡಿದರು ಎಂಬುದರ ಬಗ್ಗೆ ತಿಳಿಸಿದೆ. ಅಲ್ಲದೆ ಬಹುಜನರ ಬೇಡಿಕೆಯಂತೆ ಇದು ಆಂಗ್ಲದ ಅನುವಾದವೂ ಆಯಿತು ಆದರೆ ಸರ್ಕಾರ ಅನುವಾದ ಕೃತಿಯ ಮುದ್ರಕನಾದ ಮ್ಯಾನ್ಯುಯಲ್ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿ ದಂಡ ವಿಧಿಸಲಾಯಿತು. ಆದರೂ ಕೆಲವು ಬ್ರಿಟೀಷ್ ಅಧಿಕಾರಿಗಳು ನೀಲ್‌ದರ್ಪಣ್ ಕೃತಿಯ ಇಂಗ್ಲೀಷ್ ಅನುವಾದದ ಪರವಾಗಿ ಇದ್ದದು ಕಾಣಿಸಿದೆ.

ಬಂಗಾಳದ ನೀಲಿ ಬೆಳೆಗಾರರ ಅಂದಿನ ಸ್ಥಿತಿಗತಿಗಳ ಕರಪತ್ರ, ಹಾಡುಗಳು, ನಾಟಕಗಳಲ್ಲಿ ಇಂದಿಗೂ ಇರುವುದನ್ನು ಕಾಣಲಾಗಿದೆ. ಇವುಗಳಲ್ಲಿ ಉಲ್ಲೇಖವಿರುವಂತೆ ಪ್ಲಾಂಟರ ರೈತನ ಬಳಿ ಮೊದಲು ಬಿಕ್ಷುಕನಂತೆ ಬಂದು ಅತ್ಯಂತ ಶ್ರೀಮಂತನಾಗಿ ಹೋಗುತ್ತಾನೆ. ಪ್ಲಾಂಟರ್‌ಗಳು ರೈತರ ಬಳಿ ಸೂಜಿಯಂತೆ ಬಂದು ಹೋಗುವಾಗ ಗುಳದಂತೆ ಹೋಗುತ್ತಾರೆ. ಇಡೀ ಬಂಗಾಳವನ್ನು ಮಿಡತೆಗಳಂತೆ ನಾಶಮಾಡುತ್ತಿದ್ದಾರೆ. ಪ್ರಜೆಗಳೆಲ್ಲಾ ಮುಳುಗುವಾಗ ರಾಜ ನೋಡುತ್ತಿರುತ್ತಾನೆ. ಎಲ್ಲವೂ ಹಾಳಾಗಿ ಹೋಯಿತು. ರಾತ್ರಿ ಕಣ್ಣು ಮುಚ್ಚಿದರೆ ಎದುರಿಗೆ ಬಿಳಿಯನ ಮುಖನೇ ಬರುತ್ತದೆ. ಭಯದಿಂದ ನಮ್ಮ ಜೀವವು ಪಕ್ಷಿಯಂತೆ ಹಾರಿಹೋಗುತ್ತದೆ. ನಮ್ಮ ಆತ್ಮಗಳು ನೋವಿನ ಜ್ವಾಲೆಯಲ್ಲಿ ಮುಳುಗಿವೆ. ಇವುಗಳು ನೀಲಿ ಬೇಸಾಯಗಾರರ ಸತ್ಯದ ಮುಖಗಳಾಗಿವೆ.

**ಪರಾಮರ್ಶನ ಗ್ರಂಥಗಳು**

1) ಭಟ್ಟಾಚಾರ್ಯ, ಸುಭಾಸ್, 'ದಿ ಇಂಡಿಗೋ ದಂಗೆ ಬಂಗಾಳ' 1977

2) ಮಜುಂದಾರ್ ಆರ್.ಸಿ. 'ಬಂಗಾಳದ ಇತಿಹಾಸ'

3) ಚಂದ್ರಶೇಖರ್ ಬಿಪನ್ : ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆಂನ್ಸ್, ನ್ಯೂ ದೆಹಲಿ 1988

4) ದೇಸಾಯಿ ಎ.ಆರ್. (ಸಂ) ಪಿಸೆಂಟ್ ಸ್ಟ್ರಗಲ್ ಇನ್ ಇಂಡಿಯಾ, ನ್ಯೂ ದೆಹಲಿ 1979